ನಾವೊಂಥರ ಭಂಡಬಿದ್ದ ಫುಲ್ ಟೈಮ್ ಅಡ್ನಾಡಿ ಜನ. ಒಬ್ಬೊಬ್ಬರಿಗೆ ಒಂದೊಂದು ಏನೇನೋ ದುಶ್ಚಟ ಅಂಟಿಕೊಂಡಿರುತ್ತಲ್ವಾ? ಹಂಗೆ ನಮ್ದು ಇದೊಂದು ತರ ದುಷ್ಟ ಚಟ' ಎಂದೆ.

ಯಾವುದೋ ಜರೂರಿ ಕಾಯಕಕ್ಕೆ ಹೋಗಲು ರೆಡಿಯಾಗಿದ್ದ ಅವನು ನಮ್ಮ ಬಲೆಯಲ್ಲಿ ಸಿಕ್ಕಿಬಿದ್ದ ಮೀನಿನಂತೆ ಒದ್ದಾಡುತ್ತಿದ್ದ. 'ಏನು ನಿನ್ನ ಸಮಸ್ಯೆ. ಯಾಕೆ ಒಂಥರ ನುಲುಕಾಡುತ್ತಿದ್ದೀಯಾ?' ಎಂದು ವಿಚಾರಿಸಿದೆ. 'ಇವತ್ತು ಸಂತೆಗೆ ನಮ್ಮಕ್ಕಿಗೆ ಬರ್ತೀನಂತ ಮಾತು ಕೊಟ್ಟಿದ್ದೆ. ಲಗ್ನಾ ಆಗೋ ಚಾನ್ಸು ಇದೆ. ಬೇಗ ಹೋಗಬೇಕು ಸಾ. ಹಿಂಗಾಗಿ ನನಗೆ ಇವತ್ತು ಕೆಲಸದ ಮೇಲೆ ಮೂಡಿಲ್ಲ. ದುಡ್ಡು ಸಿಕ್ಕುತ್ತೈತೆ ಅಂತಾಯಿತಲ್ಲ, ಆಸೆ ಹುಟ್ಕೋತು. ಅವಳಿಗೇನಾರ ಕೊಡಿಸಬಹುದಲ್ವ ಅನ್ನೋ ಆಸೆ ಮೆಟ್ಕೊಂಡು ಬಿಟ್ಟಿದೆ' ಎಂದು ಒಮ್ಮೆ ನಕ್ಕು ಮರುಕ್ಷಣವೇ ಮುಖ ಕಿವುಚಿ ಕಿರಿದುಗೊಳಿಸಿದ. ಅಷ್ಟೊತ್ತಿಗಾಗಲೇ ನಾವು ನೀರ ಮೇಲೆ ಪಯಣಿಸುತ್ತಾ ಹಿನ್ನೀರಿನ ಅರ್ಧ ಭಾಗಕ್ಕೆ ಬಂದಿದ್ದೆವು.



'ವಿಷಯ ಹಿಂಗಿದ್ರೆ ದೋಣಿ ತಿರುಗಿಸು. ನಾಳೆ ಬೆಳಗ್ಗೆ ಬೇಗ ಹೋಗೋಣಂತೆ. ನಮ್ಮ ಹಕ್ಕಿಗಳು ಹೆಂಗೂ ಇಲ್ಲೇ ಇರ್ತವೆ. ನಿನ್ನ ಹಕ್ಕಿ ಅಲ್ಲಿಂದ ಹಾರೋದ್ರೆ ಹುಡುಕಿ ಹಿಡಿಯೋದು ನಮಗಂತೂ ಕಷ್ಟ' ಎಂದು ತಮಾಷೆ ಮಾಡಿ ದಡಕ್ಕೆ ದೋಣಿ ತಿರುಗಿಸಲು ಹೇಳಿದೆವು. ರಾತ್ರಿಯಿಡೀ ನಿದ್ದೆಗೆಟ್ಟು ಕೆಸರಲ್ಲಿ ಒದ್ದಾಡಿ ಸುಸ್ತಾಗಿದ್ದ ನನಗಂತೂ ಅಷ್ಟು ದೂರ ಹೋಗುವ ಹುಮ್ಮಸ್ಸು ಹೊರಟು ಹೋಗಿತ್ತು.

ಕೆಲವರು 'ಅದ್ಯಾಕೆ ಹಿಂದಕ್ಕೆ ಹೋಗದು, ಇವತ್ತಿನ ಕೋಟ ಚಚ್ಚಾಕಿ ಬಿಡೋಣ' ಎಂದು ಉತ್ಸಾಹ ತೋರಿದರು. 'ಹೀಗೆ ಅರ್ಧಕ್ಕೆ ಫೋಟೋಗ್ರಫಿ ನಿಲ್ಲಿಸಿ ಹೋಗುವುದು ಶ್ರೇಯಸ್ಸಲ್ಲ' ಎಂದು ನಮ್ಮ ತಂಡದ ಹಿರಿಯರೊಬ್ಬರು ಧಮಕಿ ಹಾಕಿದರು. ಫೋಟೋಗ್ರಫಿ ಖಂಡಿತಾ ಒಂದು ಹಟದ ಯಾನ. ಹೆದರುವುದು, ಅರ್ಧಕ್ಕೆ ಹೆದರಿ ಬಿಟ್ಟು ಓಡುವುದು ತೀರಾ ಕಡಿಮೆ. ಅದೊಂದು ಹುಚ್ಚು ಹುಮ್ಮಸ್ಸಿನ ಕೆಲಸ. ಆದರೂ ಅದು ಏಕೋ ಗೊತ್ತಿಲ್ಲ, 'ನಾವು ದಡದಲ್ಲಿ ಇಳಿದು ನೀರಲ್ಲಿ ಒಂದು ಬದಿಯಿಂದ ನಡೆಯುತ್ತಾ ಹೋಗೋಣ. ಒಲ್ಲದ ಅವನಿಗೆ ಇವತ್ತು ಬಿಟ್ಟು ಬಿಡಿ' ಎಂದು ನಾನು ಹೇಳಿದೆ. ನನ್ನ ನಿರ್ಧಾರ ನಾವಿಕ ವೆಂಕಟೇಶನೊಬ್ಬನಿಗೆ ಬಿಟ್ಟು ಉಳಿದ ಯಾರಿಗೂ ಇಷ್ಟವಾಗಿಲಿಲ್ಲ.

'ನನ್ನ ಲವ್ವಿಗೆ ಬೆಲೆ ಕೊಟ್ಟ ನಿಮಗೆ ಜೀವಾನಾದ್ರೂ ಕೊಡ್ತೀನಿ. ಎಲ್ಲಾ ಪಕ್ಷಿಗಳ ಫೋಟೋ ತೆಗಿಸಿ ಕಳಿಸ್ತೀನಿ' ಎಂದು ಆತ ಭಾವುಕವಾಗಿ ಕೈ ಬೀಸಿ ಹೋದ. ಕೊನೆಯಲ್ಲಿ, 'ನದಿ ಹರ್ಕೊಂಡು ಬಂದು ಹಿನ್ನೀರು ಸೇರೋ ದಾರಿ ಇದಕ್ಕೂ ತುಂಬಾ ಆಳ ಇರುತ್ತೆ. ನಿಮ್ಗೆ ಮೇಲ್ಗಡೆಯಿಂದ ಅದು ತಿಳಿಯಲ್ಲ. ನೋಡ್ಕೊಂಡು ಇಳೀರಿ, ಉಸುಕಿದ್ರೆ ಭಾಳಾ ಡೇಂಜರ್' ಎಂದು ನಮ್ಮನ್ನು ಎಚ್ಚರಿಸಿ ಹೋದವನು ಮಾರನೆಯ ದಿನ ಬರಲೇ ಇಲ್ಲ. ಫೋನು ಮಾಡಿದರೂ ಎತ್ತಲಿಲ್ಲ. ಮುಂದಿನ ಎರಡು ದಿನ ಅವನಿಗಾಗಿ ಕಾದೆವು. ದೋಣಿಯಿಲ್ಲದೆ ಕೆಸರಲ್ಲಿ ಹೂತು, ತಾಸುಗಟ್ಟಲೆ ನಿಂತು, ಕಪ್ಪು ರಾಡಿಯಲ್ಲಿ ಮಲಗಿ, ಅನೇಕ ಕಡೆ ಸಿಕ್ಕಿಬಿದ್ದು ಚಡಪಡಿಸಿ ಪಟಗಳ ತೆಗೆದೆವು. ಹೊರಡುವ ಕೊನೆಯ ಕ್ಷಣದಲ್ಲಿ ಹಿನ್ನೀರಿನ ಹಸಿರು ಬಯಲಲ್ಲಿ ಪ್ರತ್ಯಕ್ಷನಾದ ವೆಂಕಟೇಶ ಕಣ್ಣೀರು ಹಾಕುತ್ತಾ ನಿಂತಿದ್ದ. ಅವನ ವಿಚಾರಿಸಲು ಸಮಯವಿಲ್ಲದ ನಾವು ಅಲ್ಲಿಂದ ಹೊರಟೇಬಿಟ್ಟೆವು.

●